# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ    ದಿನಾಂಕ : DATE : 16/04/2019

### ಡೆಪ್ಯೂಟಿ ಸಿಎಜಿ ಹುದ್ದೆಗೆ ಸಂಪುಟ ಅಸ್ತು

**ನವದೆಹಲಿ:** ಮಹಾಲೇಖಪಾಲರ (ಸಿಎಜಿ) ಕೆಲಸದ ಒತ್ತಡ ತಗ್ಗಿಸಲು ಮತ್ತು ಆಡಳಿತದಲ್ಲಿ ಸುಧಾರಣೆ ತರುವ ಉದ್ದೇಶದಿಂದ ಉಪ ಮಹಾಲೇಖಪಾಲ ಹುದ್ದೆ (ಹೆಚ್ಚುವರಿ ಹುದ್ದೆ) ಸೃಷ್ಟಿಸುವ ಸರ್ಕಾರದ ಚಿಂತನೆಗೆ ಸಂಪುಟದ ಸಮ್ಮತಿ ಸಿಕ್ಕಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಆರನೇ ಡೆಪ್ಯೂಟಿ ಸಿಎಜಿ ನೇಮಕಕ್ಕೆ ಒಪ್ಪಿಗೆ ದೊರೆತಿದೆ. ಈಗಾಗಲೇ 5 ಡೆಪ್ಯೂಟಿ ಸಿಎಜಿಗಳಿದ್ದಾರೆ. ರಾಜ್ಯಗಳ ಆಡಿಟ್‌ಗಳ ಸಮನ್ವಯ ಹಾಗೂ ದೂರಸಂಪರ್ಕ ಕ್ಷೇತ್ರಕ್ಕೆ ಸಂಬಂಧಿತ ಆಡಿಟ್‌ಗಳ ಜವಾಬ್ದಾರಿ ಡೆಪ್ಯೂಟಿ ಸಿಎಜಿ ಹೆಗಲಿಗೆ ಇರಲಿದೆ. 2021ರಿಂದ 24ರವರೆಗೆ ಜಿಎಸ್‌ಎಲ್‌ವಿ ಉಡಾವಣೆ ಯೋಜನೆಗೆ 2700 ಕೋಟಿ ರೂ. ಅನುದಾನ ನೀಡಲು ಸಂಪುಟ ಒಪ್ಪಿದೆ.

2